C.C.No.2695/2022
PW-02
CW-02

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ., ಪಾವಗಡ ನ್ಯಾಯಾಲಯ**

**ಸಿ.ಸಿ. ಸಂಖ್ಯೆ 2695/2022**

**ಪ್ರಾಸಾಃ** 02

**ಚಾಸಾಃ** 02

**ದಿನಾಂಕ 09.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | - | ದೇನಾ ನಾಯಕ |
| ತಂದೆಯ ಹೆಸರು | - | ಶಂಕರ ನಾಯಕ್ |
| ವಯಸ್ಸು | - | 32 ವರ್ಷ |
| ವೃತ್ತಿ | - | ಪೈಂಟರ್ |
| ವಾಸ ಸ್ಥಳ | - | ಕೆ. ಸೇವಾಲಾಲ್ ಪುರ |

**ಮುಖ್ಯ ವಿಚಾರಣೆಃ  ಮಾನ್ಯ ಎ.ಪಿ.ಪಿ ರವರಿಂದಃ**

ಚಾಸಾ-1 ನನ್ನ ಹೆಂಡತಿ. ಚಾಸಾ-3 ನನ್ನ ತಾಯಿ. ಚಾಸಾ-4 ನನ್ನ ಅತ್ತಿಗೆ. ಚಾಸಾ-6, 7 ನಮ್ಮ ನೆರೆ ಮನೆಯವರು. ಆರೋಪಿತರನ್ನು ನೋಡಿದ್ದೇನೆ.

ದಿ.01.09.2021 ರಂದು ನಮ್ಮ ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ನಮ್ಮ ಮನೆಯಲ್ಲಿ ಕಳ್ಳತನವಾಗಿದೆ ಎಂದು ನನ್ನ ಅತ್ತಿಗೆ ಆ ದಿನ ಮದ್ಯಾಹ್ನ ನನಗೆ ಕರೆ ಮಾಡಿ ತಿಳಿಸಿರುತ್ತಾರೆ. ನಮ್ಮ ಮನೆಯ ಮುಖ್ಯ ಬಾಗಿಲು ಮತ್ತು ಮಲಗುವ ಕೋಣೆಯ ಬಾಗಿಲು ಹೊಡೆದು ಲಾಕರ್ ನಲ್ಲಿ ಇಟ್ಟಿದಂತಹ ಚಿನ್ನದ ನೆಕ್ಲೇಸ್, ಕಿವಿ ಒಲೆ, 2 ಉಂಗುರ,  ನ ಚಿನ್ನದ ತಾಳಿ, ಒಂದು ಜೊತೆ ಬೆಳ್ಳಿ ಚೈನು, ರೂ.2,500/- ನಗದನ್ನು ಯಾರೋ ಕಳ್ಳತನಮಾಡಿಕೊಂಡು ಹೋಗಿದ್ದರು. ನಾನು ತಕ್ಷಣ ನನ್ನ ಅಣ್ಣ ಪೋಲಿಸ್ ನವರಿಗೆ

ಫೋನ್ ಮೂಲಕ ವಿಷಯ ತಿಳಿಸಿರುತ್ತಾರೆ. ಪೋಲಿಸ್ ನವರು ಬಂದು ನಮ್ಮ ಮನೆಯ ಹತ್ತಿರ ಪರಿಶೀಲನೆ ಮಾಡಿರುತ್ತಾರೆ. ಮನೆಯ ಒಳಗೆ ಶ್ವಾನದಳದವರನ್ನು ಕರೆಸಿ ಪರಿಶೀಲನೆ ಮಾಡಿದ್ದಾರೆ. ನಾನು ಈ ಬಗ್ಗೆ ಹೇಳಿಕೆ ನೀಡಿದ್ದೇನೆ. ಒಂದುವರೆ ತಿಂಗಳ ನಂತರ 3 ಜನ ವ್ಯಕ್ತಿಗಳನ್ನು ಕರೆದುಕೊಂಡು ಬಂದು ನಮ್ಮ ಮನೆಯಲ್ಲಿ ಕಳ್ಳತನಮಾಡಿದ ವ್ಯಕ್ತಿಗಳು ಎಂದು ತೋರಿಸಿರುತ್ತಾರೆ. ಈಗ ನ್ಯಾಯಾಲಯದ ಮುಂದೆ ಇರುವ ಇಬ್ಬರು ವ್ಯಕ್ತಿಗಳನ್ನು ಮತ್ತು ಮತ್ತೊಬ್ಬ ವ್ಯಕ್ತಿಯನ್ನು ಆ ದಿನ ಪೋಲಿಸ್ ನವರು ಕರೆದುಕೊಂಡು ಬಂದಿರುತ್ತಾರೆ. ಮನೆಯಲ್ಲಿ ಕಳ್ಳತನವಾದ 2 ಜೊತೆ ಕಿವಿ ಒಲೆ, 2 ಉಂಗುರ ಸಿಕ್ಕಿರುತ್ತದೆ ಎಂದು ಪೋಲಿಸ್ ನವರು ತಿಳಿಸಿರುತ್ತಾರೆ. ನನ್ನ ಮಾವ ಅವುಗಳನ್ನು ನ್ಯಾಯಾಲಯದ ಆದೇಶದ ಮೇರೆಗೆ ತಮ್ಮ ವಶಕ್ಕೆ ಪಡೆದಿರುತ್ತಾರೆ. ಈ ಬಗ್ಗೆ ಮರುಹೇಳಿಕೆ ನೀಡಿದ್ದೇನೆ.

<u>ಪಾಟೀ ಸವಾಲುಃ 1 ರಿಂದ 3 ನೇ ಆರೋಪಿತರ ಪರ ಶ್ರೀ. ಎಲ್.ಎಂ ವಕೀಲರಿಂದಃ</u>

ನಾನು ಹೇಳಿಕೆ ಕೊಡುವ ಪೂರ್ವದಲ್ಲಿ ಪೋಲಿಸ್ ನವರು ನನಗೆ ನೋಟಿಸ್ ನೀಡಿರುವುದಿಲ್ಲ. ನನ್ನನ್ನು ನಮ್ಮ ಮನೆಯ ಹತ್ತಿರ ವಿಚಾರಣೆ ಮಾಡಿರುತ್ತಾರೆ. ನಾನು ಪೋಲಿಸ್ ಠಾಣೆಗೆ ಆ ದಿನ ಸಂಜೆ ಹೋಗಿರುತ್ತೇನೆ. ಪೋಲಿಸ್ ನವರು ನನಗೆ ಹೇಳಿದ್ದರಿಂದ ಆರೋಪಿತರನ್ನು ನಾನು ಈ ದಿನ ಗುರುತಿಸುತ್ತಿದ್ದೇನೆ ಎಂದರೆ ಆ ದಿನ ನಮ್ಮ ಮನೆಯ ಹತ್ತಿರ ಆರೋಪಿತರನ್ನು ಕರೆದುಕೊಂಡು ಬಂದಿದ್ದರಿಂದ ಗುರುತಿಸುತ್ತೇನೆ. ಆರೋಪಿತರನ್ನು ಆ ದಿನ ನಮ್ಮ ಮನೆಯ ಹತ್ತಿರ ಕರೆದುಕೊಂಡು ಬಂದಿಲ್ಲ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೋಲಿಸ್ ಠಾಣೆಗೆ ಹೋಗಿಲ್ಲ ಎಂದರೆ ಸರಿಯಲ್ಲ. ನಾನು

ಪೋಲಿಸ್ ನವರಿಗೆ ಹೇಳಿಕೆಯಾಗಲಿ ಮರುಹೇಳಿಕೆಯಾಗಲಿ ನೀಡಿಲ್ಲ ಎಂದರೆ ಸರಿಯಲ್ಲ.

ನಾನು ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 4 ನೇ ಆರೋಪಿತರ ಪರ ಶ್ರೀ.ಪಿ.ಎ.ಟಿ ವಕೀಲರು ಇಲ್ಲ ಎಂದು ನುಡಿದಿರುತ್ತಾರೆ.

ಮರುವಿಚಾರಣೆಃಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚುಮಾಡಲಾಯಿತು.)

ಓ . ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್. ಸಿ.,
ಪಾವಗಡ

C.C.No.2695/2022
PW-02
CW-02